
ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 4 | ಸಂಚಿಕೆ : 2 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಫೆಬ್ರವರಿ 2009



Scanned with OKEN Scanner

# ವರದಕ್ಷಿಣೆ ಮತ್ತು ಅದಕ್ಕೆ ಸಂಬಂಧ ಪಟ್ಟ ಇತರ ರೀತಿಯ ದೌರ್ಜನ್ಯಗಳನ್ನು ಕುರಿತು ಮಹಿಳಾ ನ್ಯಾಯಾಲಯ

ಆತ್ಮೀಯ ಸ್ನೇಹಿತರೇ,

ನಿಮಗೆಲ್ಲರಿಗೂ ಮುಂಚಿತವಾಗಿ ಮಾರ್ಚ್ 8, ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರುತ್ತಿದ್ದೇವೆ. ಮಾರ್ಚ್ 8, ಪ್ರಪಂಚದಾದ್ಯಂತ, ಮಹಿಳೆಯರನ್ನು ಗೌರವಿಸಿ, ಗುರುತಿಸುವಂತಹ ದಿನ. ಆದರೂ ಇಂದಿನ ಈ ಸಮಾಜದಲ್ಲಿ ವಿವಿಧ ಕಾರಣಗಳಿಂದ ಮಹಿಳೆಯರ ಮೇಲಾಗುತ್ತಿರುವ ವಿವಿಧ ದೌರ್ಜನ್ಯಗಳನ್ನು ನೋಡುತ್ತಿದ್ದರೆ, ನಾವು ಯಾವ ಶತಮಾನದಲ್ಲಿದ್ದೇವೆ ಎಂದೆನಿಸುತ್ತದೆ.

'ವಿಮೋಚನಾ' ಸಂಸ್ಥೆ ಹಾಗೂ 'ಏಷ್ಯಾ ಮಹಿಳಾ ಮಾನವ ಹಕ್ಕುಗಳ ಮಂಡಳಿ'ಯು ಭಾರತದ ವಿವಿಧ ರಾಜ್ಯದ ಮಹಿಳಾ ಮತ್ತು ಮಾನವಹಕ್ಕು ಸಂಘಟನೆಗಳ ಸಹಭಾಗಿತ್ವದಲ್ಲಿ ಮಹಿಳೆಯ ಮೇಲಾಗುತ್ತಿರುವ "ವರದಕ್ಷಿಣೆ ಹಾಗೂ ಅದಕ್ಕೆ ಸಂಬಂಧ ಪಟ್ಟ ದೌರ್ಜನ್ಯಗಳನ್ನು ಕುರಿತು" 2009 ರ ಜೂನ್‌ನಲ್ಲಿ, ಮಹಿಳಾ ನ್ಯಾಯಾಲಯವನ್ನು ಏರ್ಪಡಿಸಲು ತೀರ್ಮಾನಿಸಿದೆ.

### ಈ ನ್ಯಾಯಾಲಯದಿಂದ ಏನನ್ನು ಸಾಧಿಸಬಹುದು?

- ವರದಕ್ಷಿಣೆಯ ಕ್ರೂರ ಕೃತ್ಯಗಳನ್ನು ಜನರ ಅರಿವಿಗೆ ತಂದು ಅವರ ಮನಃಸಾಕ್ಷಿ ಕೆಣಕುವಂತೆ ಮಾಡುವುದು,
- ವರದಕ್ಷಿಣೆ ನಮ್ಮ ಸಮಾಜದಲ್ಲಿ ಎಷ್ಟರ ಮಟ್ಟಿಗೆ ಹೊಸೆದುಕೊಂಡಿದೆ ಎಂಬುದರ ಕುರಿತು ಹೊಸ ಆಲೋಚನೆಯನ್ನು ಹುಟ್ಟುಹಾಕುವುದು,
- ಪ್ರಸ್ತುತ ಲಭ್ಯವಿರುವ ಪರಿಹಾರ ಮಾರ್ಗಗಳ ಬಗ್ಗೆ ವಿಚಾರ ಮಾಡುವುದು ಮತ್ತು ವಿಮರ್ಶಿಸುವುದು
- ರಾಜ್ಯ ವ್ಯವಸ್ಥೆ ಹಾಗೂ ಜನರ ಸಾಮೂಹಿಕ ಅರಿವಿನೊಂದಿಗೆ ವಿವಿಧ ಹಂತದಲ್ಲಿ ತೊಡಗಿಸಿಕೊಳ್ಳಬಲ್ಲ ಚಳವಳಿಯೊಂದನ್ನು ಪುನರ್‌ಕಲ್ಪಿಸುವುದು.

ಭಾರತದಲ್ಲಿ ವರದಕ್ಷಿಣೆ ಎನ್ನುವುದು ಇಂದಿಗೂ ಮಹಿಳೆಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗು. ಈ ವರದಕ್ಷಿಣೆಯ ಕಾರಣದಿಂದ 1980 ದಶಕದಲ್ಲಿ 400 ರಷ್ಟು ಇದ್ದ ಸಾವಿನ ಪ್ರಮಾಣ, 1990 ರ ದಶಕದಲ್ಲಿ 5800 ರ ಗಡಿದಾಡಿದೆ. ಅಂದರೆ 20 ವರ್ಷಗಳಲ್ಲಿ 15 ಪಟ್ಟು ಹೆಚ್ಚಾಗಿದೆ ಎಂದು ಅಧ್ಯಯನಗಳು ಹೇಳುತ್ತಿವೆ. ಆದಾಗ್ಯೂ ಈ ಅಂಕಿ ಅಂಶಗಳು ನಿಖರವಾಗಿಲ್ಲ, ಕಾರಣ ಸರ್ಕಾರೀ ಇಲಾಖೆಗಳ ಅಂಕಿ ಅಂಶಗಳು ವಾಸ್ತವಾಂಶಕ್ಕೆ ದೂರವಾಗಿದೆ. ಏಕೆಂದರೆ ಎಷ್ಟೋ ಪ್ರಕರಣಗಳು 'ವರದಕ್ಷಿಣೆ ಸಾವು' ಎಂದು ದಾಖಲಾಗುವುದೇ ಇಲ್ಲ. ಕೆಲವೊಂದು ಬೆಳಕಿಗೇ ಬರುವುದಿಲ್ಲ.

ಮಹಿಳೆಯರ ಅಸ್ವಾಭಾವಿಕ ಸಾವುಗಳ ಬಗ್ಗೆ ವಿಮೋಚನಾ ಸಂಸ್ಥೆ 1997 ರಲ್ಲಿ ಅಧ್ಯಯನ ನಡೆಸಿದಾಗ ಈ ಬಹಳಷ್ಟು ಸಾವುಗಳನ್ನು "ಆಕಸ್ಮಿಕ ಸಾವು" ಹಾಗೂ "ಆತ್ಮಹತ್ಯೆ" ಎಂದು ದಾಖಲಿಸಲಾಗಿತ್ತು. ಸುಮಾರು 7 ತಿಂಗಳ ಅವಧಿಯಲ್ಲಿ ದಾಖಲಾದ ಸುಮಾರು 550 ಪ್ರಕರಣಗಳಲ್ಲಿ ಶೇ. 71 ರಷ್ಟನ್ನು "ಸ್ಟೌ ಸಿಡಿತದಿಂದ ಅಪಘಾತ" ಎಂಬ ಸಾಮಾನ್ಯ ತೀರ್ಮಾನದಿಂದ ಮುಚ್ಚಿಹಾಕಲಾಗಿತ್ತು.

ಇಂದಿಗೂ ಸಹ ಬೆಂಗಳೂರು ಮಹಾನಗರದಲ್ಲಿ ಪ್ರತಿದಿನ ಕನಿಷ್ಠ ಇಬ್ಬರು ಮೂವರು ಮಹಿಳೆಯರು ವರದಕ್ಷಿಣೆಯ ಕಾರಣದಿಂದ ಕೊಲೆಗೀಡಾಗುತ್ತಿದ್ದಾರೆ ಇಲ್ಲವೇ ಅವರನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರೇರೇಪಿಸಲಾಗುತ್ತಿದೆ. ಆದರೆ ಇದನ್ನು "ವಿವಾಹಿತ ಮಹಿಳೆಯರ ಅಸ್ವಾಭಾವಿಕ ಸಾವು" ಎಂದೇ ಪರಿಗಣಿಸಲಾಗುತ್ತಿದೆ.

ವರದಕ್ಷಿಣೆ ಕೊಡುವುದು ಹಾಗೂ ತೆಗೆದುಕೊಳ್ಳುವುದು ಕಾನೂನು ರೀತ್ಯಾ ಅಪರಾಧವಾಗಿದ್ದರೂ ಸಹ ಕೆಲವೊಂದು ವೈಯಕ್ತಿಕ ಆಚರಣೆಯ ಹೆಸರಿನಲ್ಲಿ ಇದನ್ನು ಇನ್ನೂ ಜಾರಿಯಲ್ಲಿಟ್ಟು, ಯಾವ ಅಡ್ಡಿ ಆತಂಕಗಳಿಲ್ಲದೆ ಆಚರಿಸಲಾಗುತ್ತಿದೆ. ಇಷ್ಟೆಲ್ಲಾ ಮಹಿಳಾ ಚಳವಳಿಗಳು ಪ್ರಭಾವ ಬೀರುತ್ತಿದ್ದರೂ, ಇದರ ತಡೆಗಾಗಿ ಹಲವಾರು ಕಾನೂನುಗಳು ಜಾರಿಯಾಗುತ್ತಿದ್ದರೂ, ಇಂದಿಗೂ ಮಹಿಳೆಗೆ ವರದಕ್ಷಿಣೆಯ ಕಿರುಕುಳ ತಪ್ಪಿಲ್ಲ. ವರದಕ್ಷಿಣೆ ಸಾವುಗಳು ಇಂದು ನಮ್ಮ ದೇಶದಲ್ಲಿ ತೀರಾ ಸಾಮಾನ್ಯವಾಗಿ ಬಿಟ್ಟಿದೆ. ನೆರೆಯ ನೇಪಾಳ, ಬಾಂಗ್ಲಾದೇಶ ಹಾಗೂ ಪಾಕಿಸ್ತಾನಗಳಲ್ಲೂ ಈ ಪರಿಸ್ಥಿತಿ ಭಿನ್ನವಾಗಿಲ್ಲ. ಪರಿಣಾಮವಾಗಿ ಈ ಪರಿಸ್ಥಿತಿಯು ಹೆಣ್ಣು ಭ್ರೂಣಹತ್ಯೆಯಂತಹ ಕೃತ್ಯಕ್ಕೆ ಮುಖ್ಯ ಕಾರಣವಾಗುತ್ತಿದೆ.

ಮಹಿಳಾ ನ್ಯಾಯಾಲಯ ಎಂದರೆ ಏನು? – 'ನ್ಯಾಯಾಲಯ' ಎಂದರೆ ಇಲ್ಲಿ ಕೇವಲ ಸಾಂಕೇತಿಕ ಮಾತ್ರ. ಈ ನ್ಯಾಯಾಲಯದಲ್ಲಿ ವರದಕ್ಷಿಣೆಯ ಕಾರಣದಿಂದ ನೊಂದವರ ದನಿಗಳನ್ನು ಆಲಿಸಲಾಗುವುದು. ಇಲ್ಲಿ ಮಹಿಳೆಯರು ತಮ್ಮ ನೋವನ್ನು ಧೈರ್ಯವಾಗಿ ಹೇಳಿಕೊಳ್ಳುವಂತಹ ಮುಕ್ತ ವಾತಾವರಣ ಇರುತ್ತದೆ. ಆದರೆ ಇದು ನೋವನ್ನಷ್ಟೇ ಹಂಚಿಕೊಳ್ಳುವ ವೇದಿಕೆಯಲ್ಲ, ಆ ಮೂಲಕ ನ್ಯಾಯದ ಹೊಸ ಹಾದಿಯನ್ನು ಹುಡುಕುವುದು. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳಿಗೆ, ನ್ಯಾಯ ಒದಗಿಸಿಕೊಡಲು

### ಈ ನ್ಯಾಯಾಲಯ ಪ್ರಕ್ರಿಯೆಯು ಯಾರನ್ನು ತಲುಪಬೇಕು?

**ಈ ನ್ಯಾಯಾಲಯದ ಪಾಲುದಾರ ಸಂಘಟನೆಗಳ ಸಂಪರ್ಕದಲ್ಲಿರುವ**

- **ವರದಕ್ಷಿಣೆ ಮತ್ತು ಸಂಬಂಧಿತ ದೌರ್ಜನ್ಯಕ್ಕೆ ಒಳಗಾದವರ ಕುಟುಂಬಗಳು, ತಮ್ಮ ಮೇಲಾದ ದೌರ್ಜನ್ಯವನ್ನು ಧಿಕ್ಕರಿಸಿ, ಪ್ರತಿಭಟಿಸಿ ನಿಂತಿರುವ ಧೀರ ಮಹಿಳೆಯರು**
- **ದೇಶದಾದ್ಯಂತ ಸಂಪರ್ಕದಲ್ಲಿರುವ, ಕೆಲಸ ಮಾಡುತ್ತಿರುವ ಸಮುದಾಯಗಳು**
- **ಹೆಣ್ಣು ಸಂಪತ್ತು ತರುವ ಮೂಲ ಎಂದು ನೋಡುವ ಕೌಟುಂಬಿಕ ವ್ಯವಸ್ಥೆಗಳು**
- **ಸರ್ಕಾರೀ ಆಡಳಿತ ಯಂತ್ರಗಳಾದ ಪೊಲೀಸ್, ಅಧಿಕಾರವರ್ಗ, ನ್ಯಾಯಾಂಗ ಮತ್ತು ಚುನಾಯಿತ ಪ್ರತಿನಿಧಿಗಳು**
- **ಇತರ ಸಮಾಜದ ಮುಖ್ಯ ಭಾಗಗಳಾದ, ವಿದ್ಯಾರ್ಥಿಗಳು, ಬೋಧಕ ವರ್ಗ, ಇತರ ಸಾರ್ವಜನಿಕರು, ಸ್ವಯಂ ಸೇವಾ ಸಂಘಟನೆಗಳು, ಹಾಗೂ ಕಾರ್ಮಿಕ ಸಂಘಟನೆಗಳೂ, ಕಲಾಕಾರರು, ಹಾಗೂ ಮಾಧ್ಯಮಗಳು**



Scanned with OKEN Scanner

## ನ್ಯಾಯಾಲಯದ ವಿನ್ಯಾಸ ಹೇಗಿರುತ್ತದೆ?

- ಸುಮಾರು 25 ರಿಂದ 30 ಸ್ವತಃ ಕಿರುಕುಳ ಅನುಭವಿಸಿದ ಮಹಿಳೆಯರ/ಅವರ ಕುಟುಂಬ ವರ್ಗದ ಸಾಕ್ಷ್ಯಗಳು
- ಈ ಪ್ರತ್ಯಕ್ಷ ಸಾಕ್ಷಿಗಳ ವರದಿಯನ್ನು ಯಾವ ರೀತಿ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಹೇಳಲು ಸುಮಾರು ಆರು ಪರಿಣಿತರ ಸಾಕ್ಷ್ಯಗಳು
- ವರದಕ್ಷಿಣೆ ಸಮಸ್ಯೆಯನ್ನು ಕುರಿತು ಇನ್ನೂ ಆಳವಾಗಿ ಅರ್ಥಮಾಡಿಕೊಳ್ಳಲು ನೆರವಾಗುವ ಸಾಮಾಜಿಕ ಕ್ಷೇತ್ರ, ಬೋಧನಾ ಕ್ಷೇತ್ರ, ಹಾಗೂ ನ್ಯಾಯಾಂಗಗಳಿಂದ ಬಂದ ಜೂರಿಗಳ ಅಭಿಪ್ರಯ.
- ನಾಗರಿಕ ಸಮಾಜದ ಪ್ರತಿನಿಧಿಗಳಾದ ಪ್ರೇಕ್ಷಕರು.

ವಿಫಲವಾಗುತ್ತಿರುವ ನಮ್ಮ ನ್ಯಾಯಾಂಗ ವ್ಯವಸ್ಥೆಗಳಿಗೆ ಸವಾಲೆಸೆದು, ನ್ಯಾಯದ ಹೊಸ ಹೊಸ ದಾರಿಯನ್ನು ನಾವೇ ಕಂಡುಕೊಳ್ಳುವುದು ಇದರ ಮುಖ್ಯ ಉದ್ದೇಶ.

ಈ ನಿಟ್ಟಿನಲ್ಲಿ ಮಹಿಳಾ ನ್ಯಾಯಾಲಯಗಳು ಹೆಣ್ಣಿಗೆ ನ್ಯಾಯ ದೊರಕಿಸಿ ಕೊಡುವ ಹೊಸ ಅವಕಾಶಗಳನ್ನು ಕಲ್ಪಿಸುವ ಪ್ರಯತ್ನ ಮಾಡುತ್ತಿವೆ. ಇಲ್ಲಿ ಹೊಸ ತಲೆಮಾರಿನ ಮಹಿಳಾ ಮಾನವ ಹಕ್ಕುಗಳ ಬಗ್ಗೆ ಮಾತನಾಡಲಾಗುತ್ತದೆ.

ಈ ನ್ಯಾಯಾಲಯ ಪ್ರಕ್ರಿಯೆಯಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ನಡೆಸಲಾಗುತ್ತದೆ. ಅದರಲ್ಲಿ ಮುಖ್ಯವಾಗಿ, ವಿವಿಧ ಸಂಘಟನೆಗಳ ಕೋರ್‌ಗ್ರೂಪ್ ರಚನೆ, ವಿಷಯದ ಬಗ್ಗೆ ಮಹಿಳಾ ಕ್ಯಾರವಾನ್‌ಗಳು, ನ್ಯಾಯಾಲಯಕ್ಕೂ ಮುನ್ನ ಮಾಧ್ಯಮಗಳಲ್ಲಿ ಪ್ರಚಾರ, ವೆಬ್‌ಸೈಟ್, ಚಿತ್ರೋತ್ಸವ ಇತ್ಯಾದಿಗಳು ನಡೆಯಲಿದೆ. ಇದರಲ್ಲಿ ಕೆಲವು ಚಟುವಟಿಕೆಗಳು ಪ್ರತಿಯೊಂದು ರಾಜ್ಯದಲ್ಲಿ, ಪ್ರಾದೇಶಿಕ ಮಟ್ಟದಲ್ಲಿಯೂ ನಡೆಯುತ್ತದೆ.

ಮಹಿಳೆಯನ್ನು ಮೂಲದಿಂದಲೇ ಇಲ್ಲವಾಗಿಸುವಂತಹ ಕೃತ್ಯಕ್ಕೆ ಕಾರಣವಾಗುತ್ತಿರುವ ಈ ವರದಕ್ಷಿಣೆಯ ಸಮಸ್ಯೆಯ ಸ್ವರೂಪವನ್ನು ಹೊಸರೀತಿಯಲ್ಲಿ ಅನ್ವೇಷಿಸುತ್ತಾ, ಅದರ ನಿರ್ಮೂಲನೆಗಾಗಿ ಹೊಸ ದಾರಿಯನ್ನು ಹುಡುಕಲು ನೆರವಾಗುತ್ತಿರುವ ಈ ಮಹಿಳಾ ನ್ಯಾಯಾಲಯವು ಯಶಸ್ವಿಯಾಗಲಿ ಎಂದು ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಈ ಮೂಲಕ ಆಶಿಸುತ್ತದೆ. ❑

## ಕನಿಷ್ಟ ವೇತನ ಪರಿಷ್ಕರಣೆಗೆ ಆಗ್ರಹ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಸಂಘಟನೆಗಳು ದಿನಾಂಕ 10.1.2009 ರಂದು, ಮಧುಗಿರಿ ಕ್ಷೇತ್ರದಿಂದ ನೂತನವಾಗಿ ಚುನಾಯಿತರಾದ ಶ್ರೀಮತಿ ಅನಿತಾ ಕುಮಾರ ಸ್ವಾಮಿಯವರನ್ನು ಭೇಟಿ ಮಾಡಿತು. ಗಾರ್ಮೆಂಟ್ಸ್ ಉದ್ಯಮಕ್ಕೆ ಈಗಿರುವ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕೆಂದು ಜ್ಞಾಪನಾ ಪತ್ರವನ್ನು ನೀಡುವುದು ಈ ಭೇಟಿಯ ಉದ್ದೇಶವಾಗಿತ್ತು.


ಶ್ರೀಮತಿ ಅನಿತಾ ಕುಮಾರಸ್ವಾಮಿಯವರೊಂದಿಗೆ ಕಾರ್ಯಕರ್ತರು

ಈ ಎರಡೂ ಸಂಘಟನೆಗಳ ವತಿಯಿಂದ ಈಗಾಗಲೇ 2007ರಲ್ಲಿ ಶ್ರೀ ಕುಮಾರಸ್ವಾಮಿ ನೇತೃತ್ವದ ಸರ್ಕಾರದಲ್ಲಿ, ಕಾರ್ಮಿಕ ಮಂತ್ರಿಗಳಾದ ಇಕ್ಬಾಲ್ ಅನ್ಸಾರಿಯವರಿಗೆ, ಹಾಗೂ 2008ರ ಆಗಸ್ಟ್‌ನಲ್ಲಿ ಶ್ರೀ ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಗಳಾದ ಶ್ರೀ ಬಚ್ಚೇಗೌಡರವರಿಗೆ ಕನಿಷ್ಟ ವೇತನ ಪರಿಷ್ಕರಿಸಬೇಕೆಂದು ಜ್ಞಾಪನಾ ಪತ್ರ ನೀಡಲಾಗಿತ್ತು.

ಈಗ ಮಧುಗಿರಿ ಕ್ಷೇತ್ರದಿಂದ ಚುನಾಯಿಸಿ ಬಂದಿರುವ ಶ್ರೀಮತಿ ಅನಿತಾ ಕುಮಾರಸ್ವಾಮಿಯವರಿಗೂ ಈ ಜ್ಞಾಪನಾ ಪತ್ರದ ಪ್ರತಿಯನ್ನು ನೀಡಲಾಗಿದೆ.

ಬೆಂಗಳೂರಿನಂತಹ ಮಹಾನಗರಿಯಲ್ಲಿ ತಿಂಗಳಿಗೆ ರೂ. 2650 ರ ಕನಿಷ್ಟ ವೇತನದಲ್ಲಿ ಕಾರ್ಮಿಕರು ಯಾವ ರೀತಿ ಜೀವನ ನಡೆಸಬಹುದು? ಜೊತೆಗೆ ಇತ್ತೀಚಿನ 6 ತಿಂಗಳಲ್ಲಿ ಹೆಚ್ಚಿರುವ ಬೆಲೆಯೇರಿಕೆಯಿಂದ ಜನರು ತತ್ತರಿಸುತ್ತಿದ್ದಾರೆ. ಕನಿಷ್ಟ ಮಟ್ಟದ ಜೀವನಕ್ಕೂ ಸಾಲದ ಈ ವೇತನವನ್ನು ಹೆಚ್ಚಿಸಲು ಸರ್ಕಾರಗಳು ಇದರ ಬಗ್ಗೆ ಗಮನ ಹರಿಸಲೇ ಬೇಕೆಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಈ ಮೂಲಕ ಆಗ್ರಹಿಸುತ್ತಿದೆ. ❑

## *ಕಾರ್ಮಿಕರೇ ಗಮನಿಸಿ*

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ಕಾರ್ಮಿಕರ ಮಕ್ಕಳಿಗೆ ಅದರಲ್ಲಿಯೂ ಹೆಣ್ಣುಮಕ್ಕಳಿಗೆ ಬೇಸಿಕ್ ಕಂಪ್ಯೂಟರ್ ಕೋರ್ಸ್ ಹಾಗೂ ಟ್ಯಾಲಿ ಕೋರ್ಸ್‌ಗಳನ್ನು ನಡೆಸಲಾಗುತ್ತದೆ. ಪ್ರತಿ ವರ್ಷ ಡಿಸೆಂಬರ್ ಹಾಗೂ ಮೇ ತಿಂಗಳಲ್ಲಿ ಇದಕ್ಕೆ ಅರ್ಜಿಯನ್ನು ವಿತರಿಸಲಾಗುತ್ತದೆ.

***ಸಮಯ***

ಎರಡು ಬ್ಯಾಚ್ 1 ರಿಂದ 3 ಗಂಟೆ
ಹಾಗೂ 3 ರಿಂದ 5 ಗಂಟೆ

***ಅರ್ಹತೆ***

10ನೆ ತರಗತಿ ಪಾಸ್ ಅಥವಾ ಫೇಲ್

*ಹೆಚ್ಚಿನ ಮಾಹಿತಿಗಾಗಿ ವಿಳಾಸ:*
**ಕಾರ್ಮಿಕರ ಸಹಾಯಕ ಕೇಂದ್ರ, 5ನೆ ಕ್ರಾಸ್,**
**ಸಿದ್ಧಾರ್ಥ ಸ್ಕೂಲ್ ಪಕ್ಕ, ಬಾಪೂಜಿ ನಗರ,**
**ಬೆಂಗಳೂರು – 26**
***ಇಲ್ಲಿ ಸಂಜೆ 4.30 ರ ನಂತರ ಸಂಪರ್ಕಿಸಬಹುದು.***
**ಅರ್ಹವಿರುವ ಕಾರ್ಮಿಕರ ಹೆಣ್ಣುಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.**

*ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:*
**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
**9844959210, 9449506451**



Scanned with OKEN Scanner

# 'ಮುನ್ನಡೆ ಸಮಾವೇಶ'

*ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ತನ್ನ ಎರಡನೇ ಚುನಾವಣೆಯನ್ನು ಯಶಸ್ವಿಯಾಗಿ ಮುಗಿಸಿದ್ದು ಹೊಸ ಕಾರ್ಯಕಾರಿ ಸಮಿತಿಯ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ಈ ಕಾರ್ಯಕ್ರಮದ ಒಂದು ಸಂಕ್ಷಿಪ್ತ ವರದಿ ಇಲ್ಲಿದೆ.*

'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಸಂಘಟನೆಯು 4 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಸಂಘದ ನಿಯಮಾವಳಿಗಳ ಪ್ರಕಾರ, ಕಾರ್ಯಕಾರೀ ಸದಸ್ಯರ ಸ್ಥಾನಕ್ಕೆ 2ನೇ ಚುನಾವಣೆಯು 2008ರ ನವೆಂಬರ್ 1 ಹಾಗೂ 2 ರಂದು ರಾಮನಗರದ ಜಾನಪದ ಲೋಕದಲ್ಲಿ ನಡೆಯಿತು.

ಈ ಸಮಾರಂಭ ಬರಿಯ ಚುನಾವಣೆಯಾಗದೆ, ಮುನ್ನಡೆಯ ಸದಸ್ಯರೆಲ್ಲ, ಒಂದು ಗೂಡಿ ತಮ್ಮ ತಮ್ಮ ಸಮಸ್ಯೆಗಳನ್ನು ಕುರಿತು ಚರ್ಚಿಸುವ ಒಂದು ವೇದಿಕೆಯೂ ಆಗಬೇಕು ಎಂದು ತೀರ್ಮಾನಿಸಿ ಎರಡು ದಿನಗಳ ಕಾರ್ಯಕ್ರಮವನ್ನು ಏರ್ಪಡಿಸಿ, **"ಮುನ್ನಡೆ ಸಮಾವೇಶ'** ಎಂದು ಕರೆಯಲಾಯಿತು. ಸಮಾವೇಶದಲ್ಲಿ ಸುಮಾರು 350 ಕಾರ್ಮಿಕರು ಭಾಗವಹಿಸಿದ್ದರು.

ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ಮೊದಲನೇ ದಿನ ಮುನ್ನಡೆಯ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಸರೋಜಾ ಅವರು ಓದಿದರು. ನಂತರ ಭಾಗವಹಿಸಿದ್ದ ಕಾರ್ಮಿಕರು 14 ಗುಂಪುಗಳಾಗಿ ವಿಂಗಡನೆಯಾಗಿ ಮುಖ್ಯವಾಗಿ ಕೆಳಗಿನ ಎರಡು ವಿಷಯಗಳನ್ನು ಕುರಿತು ಚರ್ಚಿಸಿದರು.


ಕಾರ್ಮಿಕರಿಂದ ಗುಂಪು ಚರ್ಚೆ


ಚರ್ಚೆಯ ವರದಿ

1. ಸಮಾಜದಲ್ಲಿ ಕಾರ್ಮಿಕ ಮಹಿಳೆ ಅನುಭವಿಸುತ್ತಿರುವ ವಿವಿಧ ದೌರ್ಜನ್ಯಗಳ ಬಗ್ಗೆ
2. ಮಹಿಳಾ ಕಾರ್ಮಿಕರ ಸಮಸ್ಯೆಗಳಿಗೆ 'ಮುನ್ನಡೆ' ಹೇಗೆ ಸ್ಪಂದಿಸಬೇಕು?

ಈ ಎರಡು ಪ್ರಶ್ನೆಗಳನ್ನು ಕುರಿತು ಚರ್ಚೆ ಮಾಡಿದ ವಿಷಯಗಳನ್ನು ಪ್ರತಿ ಗುಂಪಿನಿಂದಲೂ ಇಬ್ಬರು ಕಾರ್ಮಿಕರು ವೇದಿಕೆಗೆ ಬಂದು ತಿಳಿಸಿದರು. ಎಲ್ಲರ ಅಭಿಪ್ರಾಯವೂ ಎಲ್ಲರಿಗೂ ಒಪ್ಪಿಗೆಯಾಗಿ ಸಭೆ ಪ್ರತಿಯೊಂದು ಗುಂಪಿನ ಪ್ರತಿನಿಧಿಗಳು ಹಂಚಿಕೊಂಡಾಗಲೂ ಸಮ್ಮತಿ ಪೂರ್ವಕವಾಗಿ ಚಪ್ಪಾಳೆ ತಟ್ಟುತ್ತಿದ್ದರು.

ನಂತರ ಕರ್ನಾಟಕ ರಾಜ್ಯ ರೈತಸಂಘದ ಮಹಿಳಾ ಘಟಕದ ಕಾರ್ಯದರ್ಶಿ ಹಾಗೂ ಮಂಡ್ಯದ ಸ್ಪಂದನಾ ಸಂಘಟನೆಯ ಸುನಂದಾ ಜಯರಾಮ್ ರವರು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದರು. ಅವರು ಮಾತನಾಡಿದ ಕೆಲವು ಮುಖ್ಯ ಅಂಶ:

"ಇಲ್ಲಿ ನೆರೆದಿರುವ ಮಹಿಳೆಯರು ಹಂಚಿಕೊಂಡ ಸಮಸ್ಯೆಗಳ ಬಗ್ಗೆ ಕೇಳಿದೆ. ಇದು ಬರಿಯ ಕಾರ್ಮಿಕ ಮಹಿಳೆಯರ ಸಮಸ್ಯೆಯಲ್ಲ, ರೈತ ಮಹಿಳೆಯರದೂ ಮತ್ತು ಇಡೀ ಮಹಿಳಾ ಕುಲದ ಸಮಸ್ಯೆ ಇವುಗಳೇ ಆಗಿದೆ. ಸಂಘಟನೆ ಕಟ್ಟುವುದು, ಅದರ ಮೂಲಕ ಹೋರಾಡುವುದರ ಮೂಲಕವೇ ಇದಕ್ಕೆ ಪರಿಹಾರ ಕಂಡುಕೊಳ್ಳಲು ಯತ್ನಿಸಬೇಕು. ನಾವು ಸಂಘಟನೆ ಕಟ್ಟುವಾಗ ಕಾನೂನಿನ ಬಗ್ಗೆ ಬಹಳ ತಿಳಿದುಕೊಂಡಿರಬೇಕು. ಉದಾಹರಣೆಗೆ ಮಗುವಿನ ಮೇಲೆ ಅತ್ಯಾಚಾರ ನಡೆಯುತ್ತದೆ ಎಂಬುದು ಎಲ್ಲರ ಕರುಳು ಕಿವುಚುವ ವಿಷಯ. ಆ ಬಾಲಕಿಗೆ ನ್ಯಾಯ ಕೊಡಿಸಿ ಅಪರಾಧಿಯನ್ನು ಬಂಧಿಸಬೇಕಾದರೆ, ಮಗುವಿನ ಕಡೆಯವರು, ಸಂಘಟನೆಯವರು ಕೆಲವು ಕಾನೂನುಗಳನ್ನು ತಿಳಿಯಲೇ ಬೇಕಾಗಿರುತ್ತದೆ. ಬರಿಯ ಭಾವನೆಗಳಿಂದ ನ್ಯಾಯ ಸಿಗುವುದಿಲ್ಲ, ಪ್ರತಿಯೊಂದು ಘಟನೆಯಲ್ಲಿಯೂ ಅದಕ್ಕೆ ಅನ್ವಯವಾಗುವ ಕಾನೂನನ್ನು ಸರಿಯಾಗಿ ತಿಳಿದು ಅದನ್ನು ಸೂಕ್ತವಾಗಿ ಬಳಸುವುದನ್ನು ಸಂಘಟನೆಯಲ್ಲಿ ಅಭ್ಯಾಸ ಮಾಡಿಕೊಳ್ಳಬೇಕು."


ಶ್ರೀಮತಿ ಸುನಂದಾ ಜಯರಾಮ್ ಅವರಿಂದ ಮಾತು

**ಚುನಾವಣೆ ಪ್ರಕ್ರಿಯೆ**

ನಂತರ ಮುನ್ನಡೆಯ ಕಾರ್ಯಕಾರೀ ಸಮಿತಿಯ ಸದಸ್ಯರಾಗಲು ಸ್ಪರ್ಧಿಸಿದ ವಿವಿಧ ಏರಿಯಾಗಳ 28 ಕಾರ್ಮಿಕರು ಒಬ್ಬೊಬ್ಬರಾಗಿ ವೇದಿಕೆಗೆ ಬಂದು ತಮಗೇ ಮತಹಾಕ ಬೇಕೆಂದು ಕಾರ್ಮಿಕರಲ್ಲಿ ವಿನಂತಿಸಿಕೊಂಡರು.


ಕಾರ್ಯಕ್ರಮದಲ್ಲಿ ನೆರೆದ ಕಾರ್ಮಿಕರು



Scanned with OKEN Scanner

20 ಜನರ ಸಮಿತಿಗೆ 28 ಮಂದಿ ಸ್ಪರ್ಧಿಸಿದ್ದು, ಪ್ರತಿ ಕಾರ್ಮಿಕರೂ ತಮ್ಮ ಆಯ್ಕೆಯ 5 ಜನರನ್ನು ಬ್ಯಾಲೆಟ್ ಪೇಪರ್‌ನಲ್ಲಿ ಸೂಚಿಸಬಹುದು ಎಂದು ತಿಳಿಸಲಾಯಿತು.

ನಂತರ ಚುನಾವಣೆ ಪ್ರಾರಂಭವಾಯಿತು. 4 ಕಡೆಯಲ್ಲಿ ಮತ ಪೆಟ್ಟಿಗೆಗಳನ್ನು ಇಟ್ಟು ಕಾರ್ಮಿಕರನ್ನು ವಿಂಗಡಿಸಲಾಯಿತು. ಸಾಲಿನಲ್ಲಿ ನಿಂತ ಕಾರ್ಮಿಕರು ಮತಪೆಟ್ಟಿಗೆಯ ಹತ್ತಿರ ಕೊಡುತ್ತಿದ್ದ ಬ್ಯಾಲೆಟ್ ಪೇಪರ್‌ನಲ್ಲಿ ತಮ್ಮ ಆಯ್ಕೆಯ ಐದು ಜನರನ್ನು ಆಯ್ಕೆ ಮಾಡಿದರು. ಕಾರ್ಮಿಕರಲ್ಲಿ ತಮ್ಮ ಹಕ್ಕು ಚಲಾಯಿಸುತ್ತಿದ್ದ ಉತ್ಸಾಹ ತುಂಬಿತ್ತು. ಸುಮಾರು 285 ಮಂದಿ ಕಾರ್ಮಿಕರು ಮತ ಚಲಾಯಿಸಿದರು.

**ಸಾಂಸ್ಕೃತಿಕ ಕಾರ್ಯಕ್ರಮ**

ಚುನಾವಣಾ ಪ್ರಕ್ರಿಯೆ ಮುಗಿದ ನಂತರ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರಂಭವಾಯಿತು. 'ಮುನ್ನಡೆ' ಯ ಯುವ ತಂಡ, 'ಮಾನವಿ ಕಲಾತಂಡ' ಹಾಗೂ 'ಜನರೂಪಿ ಸಾಂಸ್ಕೃತಿಕ ವೇದಿಕೆ'ಯ ಸದಸ್ಯರು ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕಾರ್ಮಿಕರ ಅಭಿಪ್ರಾಯದ ಪ್ರಕಾರ ಈ ಕಾರ್ಯಕ್ರಮವು ಉತ್ತಮವಾಗಿದ್ದು, ಕಾರ್ಮಿಕರ ಮನರಂಜಿಸಿತು.



ಮಾನವಿ ಕಲಾತಂಡದಿಂದ ಕ್ರಾಂತಿಗೀತೆ

**ಎರಡನೇ ದಿನ: ದಿನಾಂಕ 2.11.2008, ಭಾನುವಾರ**

ಹಿಂದಿನ ದಿನ ಆಯ್ಕೆಯಾದ ಪದಾಧಿಕಾರಿಗಳು ವೇದಿಕೆಗೆ ಬಂದು ತಮ್ಮ ಅಭಿಪ್ರಾಯ ಹಾಗೂ ಮುಂದಿನ ತಮ್ಮ ಕ್ರಮಗಳನ್ನು ಕುರಿತು ಹಂಚಿಕೊಂಡರು. ನೆರೆದಿದ್ದ ಕಾರ್ಮಿಕರ ಬೆಂಬಲವು ತಮಗೆ ಬೇಕು. ಈ ಚುನಾವಣೆ ಒಂದು ಸಂಕೇತ ಮಾತ್ರ, ನಾವು ಪದಾಧಿಕಾರಿಗಳು ಎಂದು ನಮ್ಮನ್ನು ನೀವು ದೂರ ಮಾಡಬಾರದು, ಎಂದು ಕಾರ್ಮಿಕರನ್ನು ಉದ್ದೇಶಿಸಿ ಕೇಳಿದರು.



ಶ್ರೀಮತಿ ಹೇಮಲತಾ ಮಹಿಷಿ ಅವರಿಂದ ಮಾತು

ನಂತರ ಮುನ್ನಡೆಯ ಸಲಹಾ ಮಂಡಳಿಯ ಸದಸ್ಯರಾದ ಹೇಮಲತಾ ಮಹಿಷಿ, ಹಾಗೂ ಡೋನಾ ಫರ್ನಾಂಡಿಸ್ ಮತ್ತು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ರುಕ್ಮಿಣಿ ಯವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು. ನಂತರ ಸಿವಿಡೆಪ್ ಇಂಡಿಯಾದ ಯಶೋಧಾರವರು ತಮ್ಮ ಅಭಿಪ್ರಾಯ ಹಂಚಿಕೊಂಡರು. ತುಳಸಿ ಹಾಗೂ ನಾಗರತ್ನ ಮುನ್ನಡೆಯ ಸಾಮಾನ್ಯ ಸದಸ್ಯರಾಗಿ ತಮ್ಮ ಅಭಿಪ್ರಾಯ ಹಂಚಿಕೊಂಡರು. ಯುವ ತಂಡದಿಂದ ಒಂದು ಗೀತೆಯೊಂದಿಗೆ 12.45 ಕ್ಕೆ ಕಾರ್ಯಕ್ರಮ ಮುಕ್ತಾಯ ಗೊಳಿಸಲಾಯಿತು. ಈ ಎರಡು ದಿನಗಳ ಕಾರ್ಯಕ್ರಮದ ನಿರೂಪಣೆಯನ್ನು ಸಿವಿಡೆಪ್ ಇಂಡಿಯಾದ ಪ್ರತಿಭಾರವರು ನಡೆಸಿಕೊಟ್ಟರು. ❑

## ಇವರೇ ನಮ್ಮ ನೂತನ ಪ್ರತಿನಿಧಿಗಳು


ದಿನಾಂಕ 1–11–2008ರಂದು, ಚುನಾವಣಾ ಫಲಿತಾಂಶವನ್ನು ಪ್ರಕಟಿಸಲಾಯಿತು. ಅದರಲ್ಲಿ ಈ ಕೆಳಗಿನ ಸದಸ್ಯರು ಕಾರ್ಯಕಾರೀ ಸಮಿತಿಯ ಸದಸ್ಯರಾಗಲು ಅರ್ಹರಾಗಿದ್ದರು.



ನೂತನವಾಗಿ ಆಯ್ಕೆಯಾದ ಕಾರ್ಯಕಾರಿ ಸಮಿತಿಯ ಸದಸ್ಯರು

1. ರತ್ನಮ್ಮ – ಪ್ರಧಾನ ಕಾರ್ಯದರ್ಶಿ, ನಾಯಂಡಹಳ್ಳಿ
2. ಲಲಿತಾ – ಖಜಾಂಚಿ, ನಾಯಂಡ ಹಳ್ಳಿ
3. ಸರೋಜಾ – ಉಪಾಧ್ಯಕ್ಷರು, ನಾಯಂಡಹಳ್ಳಿ
4. ಯಮುನಾ – ಅಧ್ಯಕ್ಷರು, ಕೆಂಚೇನಹಳ್ಳೀ
5. ಶಿವಮ್ಮ – ಸಂಘಟನಾ ಕಾರ್ಯದರ್ಶಿ ಕಸ್ತೂರಬಾ ನಗರ
6. ಅಕ್ಕಮ್ಮ – ಕಸ್ತೂರಬಾ ನಗರ
7. ರತ್ನಮ್ಮ – ಹಲಗೆ ವಡೇರಹಳ್ಳಿ
8. ಮದೀನಾ ತಾಜ್– ಕೆಂಗೇರಿ ಉಪನಗರ
9. ವೆಂಕಟಲಕ್ಷ್ಮಿ – ಕಸ್ತೂರಬಾ ನಗರ
10. ಕವಿತಾ – ಮಲ್ಲತ್ತಹಳ್ಳಿ
11. ಸುಜಾತಾ – ನಾಯಂಡಹಳ್ಳಿ
12. ರಾಧಾ – ನಾಯಂಡಹಳ್ಳಿ
13. ರತ್ನ – ದೀಪಾಂಜಲಿನಗರ
14. ಶಾಂತಲಕ್ಷ್ಮಿ – ಶ್ರೀನಗರ
15. ಸುಲೋಚನಾ – ನಾಯಂಡಹಳ್ಳಿ
16. ಶೀಜಾ – ನಾಯಂಡಹಳ್ಳಿ
17. ಅನಿತಾ – ಸಂಜಯನಗರ
18. ಭಾಗ್ಯಮ್ಮ – ಕೆಂಗೇರಿ
19. ಮಂಜುಳಾ – ಕಸ್ತೂರಬಾನಗರ
20. ಭಾಗ್ಯಮ್ಮ – ಆಜಾದ್ ನಗರ

# "ಬನ್ನಿ ಮುನ್ನಡೆಯೋಣ" ರೇಡಿಯೋ ಕಾರ್ಯಕ್ರಮ – ಮುನ್ನಡೆಯ ಹೊಸ ಹೆಜ್ಜೆ



ಸ್ನೇಹಿತರೇ. ಇನ್ನೊಂದು ಹೊಸ ಪ್ರಯತ್ನ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು "ಬನ್ನಿ ಮುನ್ನಡೆಯೋಣ" ಎಂಬ ರೇಡಿಯೋ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸುತ್ತಿದೆ. ಎಫ್.ಎಂ ರೈನ್ ಬೋ 101.3 ವಾಹಿನಿಯಲ್ಲಿ ಪ್ರಸಾರವಾಗುವ ಈ ಕಾರ್ಯಕ್ರಮದಲ್ಲಿ ಕಾರ್ಮಿಕರು ತಿಳಿದುಕೊಳ್ಳಲೇಬೇಕಾದ ಕೆಲವು ಕಾನೂನುಗಳ ಬಗ್ಗೆ ತಿಳಿಸಲಾಗುತ್ತಿದೆ. ಫೆಬ್ರವರಿ 14 ನೇ ತಾರೀಖಿನಿಂದ ಪ್ರತಿ ಶನಿವಾರ ಬೆಳಿಗ್ಗೆ 8.00 ಕ್ಕೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ.

ನಿಮಗೆಲ್ಲರಿಗೂ ತಿಳಿದಿರುವಂತೆ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಕಳೆದ ಹತ್ತು ವರ್ಷಗಳಿಂದ ಮಹಿಳಾ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಸಮಾಜದಲ್ಲಿ ಹಾಗೂ ಕೆಲಸದ ಸ್ಥಳದಲ್ಲಿ ಅವರ ಸ್ಥಾನಮಾನಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸಮಾಡುತ್ತಿದೆ.

ಈ ಉದ್ದೇಶವನ್ನು ಸಾಧಿಸಲು, ಕಾರ್ಮಿಕರ ಮನೆಗಳ ಹತ್ತಿರ ಅವರನ್ನು ಸಂಘಟಿಸುತ್ತಿರುವುದು, ಅವರ ಸಮಸ್ಯೆಗಳಿಗೆ ಸಲಹೆ ನೀಡುವುದು, ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಇನ್ನೂ ಹೆಚ್ಚಿನ ಸಂಪರ್ಕಕ್ಕೆ 'ಸೂಜಿ–ದಾರ' ಎಂಬ ವಾರ್ತಾಪತ್ರವನ್ನು ಹೊರತರುತ್ತಿರುವುದು, ಸರ್ಕಾರದ ಮಟ್ಟದಲ್ಲಿ ಕಾರ್ಮಿಕರ ವಿಷಯವನ್ನು ಗಮನಕ್ಕೆ ತರುವುದು, ಇತ್ಯಾದಿ ಚಟುವಟಿಕೆಗಳನ್ನು ಮುನ್ನಡೆ ನಡೆಸಿಕೊಳ್ಳುತ್ತಾ ಬಂದಿದೆ.

ಆದರೆ ಬೆಂಗಳೂರಿನಲ್ಲಿರುವ ಸುಮಾರು 3.52 ರಷ್ಟು ಕಾರ್ಮಿಕರನ್ನು ಮುಟ್ಟಲು, ಒಂದು ವಿಶಾಲ ಮಾಧ್ಯಮ ಬೇಕು ಎಂದು ಮುನ್ನಡೆ ಯೋಚಿಸಿದಾಗ ಹೊಳೆದದ್ದು, ಈ ರೇಡಿಯೋ ಕಾರ್ಯಕ್ರಮ. ಅದರ ಪ್ರತಿಫಲವೇ "ಬನ್ನಿ ಮುನ್ನಡೆಯೋಣ" ಕಾರ್ಯಕ್ರಮದ ರೇಡಿಯೋ ಪ್ರಸುತಿ.

ದಯವಿಟ್ಟು ಪ್ರತಿಯೊಬ್ಬರೂ ಫೆಬ್ರವರಿ 14 ರಿಂದ ಪ್ರತಿ ಶನಿವಾರ ಬೆಳಿಗ್ಗೆ 8.00 ಗಂಟೆಗೆ ಎಫ್.ಎಂ ರೈನ್ ಬೋ (101.3) ಕೇಳುವುದನ್ನು ಮರೆಯದಿರಿ. ತಾವೂ ಕೇಳಿ, ತಮ್ಮ ಗೆಳೆಯರಿಗೂ ಕೇಳಿಸಿ. ತಮ್ಮ ಅಭಿಪ್ರಾಯವನ್ನು ಈ ಕೆಳಕಂಡ ಸಂಖ್ಯೆಗಳಿಗೆ ಫೋನ್ ಮಾಡಿ ತಿಳಿಸಿ.

*ದೂರವಾಣಿ : 9945294865 / 26751320*

## ಊಟಕ್ಕೆ ಜಾಗವೆಲ್ಲಿ ?.....



ಇಲ್ಲಿ ಪಕ್ಕದಲ್ಲಿರುವ ಫೋಟೋ ಗಮನಿಸಿದಿರಾ? ಇದು ಯಾರೋ ವಿಹಾರಕ್ಕೆಂದು ಬಂದು ಒಟ್ಟಿಗೇ ಊಟ ಮಾಡುತ್ತಿರುವಂತೆ ಇದೆ ಅಲ್ಲವೇ? ಆದರೆ, ಮೈಸೂರು ರಸ್ತೆಯ ಪಂತರಪಾಳ್ಯದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಕಾರ್ಮಿಕರು ಮಧ್ಯಾಹ್ನ ಊಟದ ಸಮಯದಲ್ಲಿ, ಕಾರ್ಖಾನೆಯಲ್ಲಿ ಊಟ ಮಾಡಲು ಅನುಕೂಲವಾದ ಸ್ಥಳವಿಲ್ಲದೆ, ಹೀಗೆ ಧೂಳು, ಮಣ್ಣಿನ ಮಧ್ಯೆ ಅಸುರಕ್ಷಿತ ವಾತಾವರಣದಲ್ಲಿ ಕುಳಿತು ಊಟಮಾಡುತ್ತಿದ್ದಾರೆ. ಇದು ಒಂದು ಕಾರ್ಖಾನೆಯ ಪರಿಸ್ಥಿತಿಯಲ್ಲ, ಹಲವಾರು ಕಾರ್ಖಾನೆಗಳಲ್ಲಿ ಕಾರ್ಮಿಕರದು ಇದೇ ಸ್ಥಿತಿ.

ಫ್ಯಾಕ್ಟರಿಗಳ ಕಾಯಿದೆಯು ಪ್ರತಿ 250 ಮಂದಿ ಕಾರ್ಮಿಕರಿದ್ದರೆ ಕಾರ್ಖಾನೆಯು ಕಡಿಮೆ ದರದಲ್ಲಿ ಊಟ ನೀಡುವ ಕ್ಯಾಂಟೀನ್ ಅನ್ನು ಒದಗಿಸಬೇಕೆಂದು ವಿವರಿಸುತ್ತದೆ. ಆದರೆ ಕಾರ್ಖಾನೆಗಳು, ಕಡಿಮೆ ದರದಲ್ಲಿ ಊಟ ನೀಡುವುದಿರಲಿ, ಊಟಕ್ಕೆ ಸರಿಯಾದ ಸ್ಥಳ ಒದಗಿಸಿದರೆ ಹೆಚ್ಚು ಎಂಬಂತಾಗಿದೆ.

ಕೆಲವು ಕಾರ್ಖಾನೆಗಳಲ್ಲಿ ಊಟ ಮಾಡಲು ಸ್ಥಳ ವ್ಯವಸ್ಥೆ ಮಾಡಿರುತ್ತಾರೆ. ಆದರೆ ಅದು ಕಾರ್ಮಿಕರು ಸುಲಭವಾಗಿ ತಲುಪದಷ್ಟು ದೂರದಲ್ಲಿ ಅಥವಾ ಎತ್ತರದ ಮಹಡಿಯ ಮೇಲೆ ಇರುತ್ತದೆ. ವಾಸ್ತವದ ಅರಿವಿಲ್ಲದೆ, ಕೇವಲ ತೋರಿಕೆಗೆ ಸ್ಥಳಾವಕಾಶ ಮಾಡಿದರೆ ಕಾರ್ಮಿಕರು ಅದನ್ನು ಉಪಯೋಗಿಸಲು ಆಗುವುದಿಲ್ಲ.

ಕಾರ್ಮಿಕರಿಗೆ ಊಟಮಾಡಲು ಸಿಗುವುದೇ ಅತ್ಯಂತ ಕಡಿಮೆ ಸಮಯ ಅಂದರೆ 30 ನಿಮಿಷಗಳು. ಇದರಲ್ಲಿ ಮೊದಲ 7–8 ನಿಮಿಷಗಳು ಅವರು ಕುಳಿತಿದ್ದ ಸ್ಥಳ ಬಿಟ್ಟು ಎದ್ದು ಬಂದು, ತಮ್ಮ ಬ್ಯಾಗ್ ತೆಗೆದುಕೊಂಡು ಬಂದು ಊಟ ಮಾಡಲು ಸಿದ್ಧಮಾಡಿಕೊಳ್ಳುವುದರಲ್ಲಿ ಕಳೆದುಹೋಗುತ್ತದೆ. ಇನ್ನು ಫಿಕ್ಸ್ ಮಾಡಿರುವ ಟಾರ್ಗೆಟ್ ಮುಗಿಸಿರದಿದ್ದರೆ, ಮಾಡುವ ಊಟವನ್ನು ಗಬಗಬನೆ 10 ನಿಮಿಷದಲ್ಲಿ ತಿಂದು ಕೆಲಸಕ್ಕೆ ಓಡುವ ಧಾವಂತ ಬೇರೆ.

ಹೀಗಿರುವಾಗ ಊಟಕ್ಕೆ ಕಾರ್ಖಾನೆಯು ಕೊಟ್ಟಿರುವ ಸ್ಥಳಕ್ಕೆ ಮೆಟ್ಟಿಲು ಹತ್ತಿ, ಅಥವಾ ನಡೆದು ಹೋಗಲು ಯಾರಿಗೆ ಸಮಯವಿರುತ್ತದೆ? ಕಾರ್ಖಾನೆಯ ಆಡಳಿತ ವರ್ಗದವರು ಈ ವಿಷಯವನ್ನು ಗಮನಿಸಿ ಕಾರ್ಮಿಕರು ನೆಮ್ಮದಿಯಿಂದ ಊಟ ಮಾಡಲು ಶುದ್ಧವಾದ ಸ್ವಚ್ಛವಾದ ಸ್ಥಳಾವಕಾಶ ಒದಗಿಸಿಕೊಡಬೇಕೆಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಈ ಮೂಲಕ ಆಗ್ರಹಿಸುತ್ತಿದೆ. ❑



Scanned with OKEN Scanner

# ಗಾರ್ಮೆಂಟ್ಸ್ ಕಾರ್ಖಾನೆಗಳು ಮುಚ್ಚುತ್ತವೆಯೇ?





ಬೆಂಗಳೂರಿನಲ್ಲಿರುವ ಸಾವಿರಕ್ಕೂ ಹೆಚ್ಚು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಬಾಯಲ್ಲಿ ಒಂದೇ ಮಾತು "ಕಾರ್ಖಾನೆಗಳು ಮುಚ್ಚುತ್ತವೆಯಂತೆ ಮುಂದೇನು?" ಈ ಕಾರ್ಖಾನೆಗಳೂ ಮುಚ್ಚಿದರೆ ಎಲ್ಲಿ ಹೋಗುವುದೆಂಬ ಆತಂಕದಿಂದಲೇ ಕಾರ್ಮಿಕರೆಲ್ಲರೂ ದಿನ ದೂಡುತ್ತಿದ್ದಾರೆ. ಈ ಸುದ್ದಿ ಎಷ್ಟು ನಿಜ?

ಇಂಥದೊಂದು ಅನುಮಾನದೊಂದಿಗೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಕಾರ್ಯಕರ್ತರು ಬೆಂಗಳೂರಿನ ಪೀಣ್ಯ, ಮೈಸೂರು ರಸ್ತೆ, ಹೊಸೂರು ರಸ್ತೆಯಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಸಮೀಕ್ಷೆ ನಡೆಸಿದಾಗ ಕೆಳಗಿನ ಅಂಶಗಳು ತಿಳಿದುಬಂದಿದೆ.

2008ರ ವರ್ಷದ ಮಧ್ಯದಲ್ಲಿ ರೂಪಾಯಿಯ ಎದುರು ಡಾಲರ್ ಮೌಲ್ಯ ಕುಸಿದಾಗ, (ರೂ. 38)ಭಾರತಕ್ಕೆ ಬರುತ್ತಿದ್ದ ವಿದೇಶದ ಆರ್ಡರ್‌ಗಳು ಕಡಿಮೆಯಾದವು. ಇದರ ಪರಿಣಾಮವಾಗಿ ಮುಂದಿನ ಐದು ತಿಂಗಳಲ್ಲಿ ಭಾರತದಿಂದ ಉಡುಪು ರಫ್ತು ಮಾಡುವ ಪ್ರಮಾಣ ಕಡಿಮೆಯಾಯಿತು. ಈ ಕಾರಣಕ್ಕೆ 2008ರ ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳಲ್ಲಿ ಕಾರ್ಖಾನೆಗಳ ಮಾಲೀಕರು ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ಪ್ರಕ್ರಿಯೆಯೂ ನಡೆಯಿತು. ಕೆಳಗೆ ಕಾಣಿಸಿರುವ ಅಂಕಿಅಂಶದ ಪ್ರಕಾರ ಭಾರತ ಅಕ್ಟೋಬರ್ ತಿಂಗಳಿನಿಂದ ಕಾರ್ಮಿಕರು ಬಿಡುವಿಲ್ಲದೆ ಓ.ಟಿ ಮಾಡುತ್ತಿದ್ದಾರೆ.

ಪ್ರಪಂಚದಾದ್ಯಂತ ಉಂಟಾಗಿರುವ ಆರ್ಥಿಕ ಮುಗ್ಗಟ್ಟಿನಿಂದ ಭಾರತದ ರಫ್ತು ವಹಿವಾಟಿನ ಮೇಲೆ ಪರಿಣಾಮ ಬೀರುವುದು ನಿಜವಾದರೂ ದೇಶದ ಗಾರ್ಮೆಂಟ್ಸ್ ಉದ್ಯಮದ ಮೇಲೆ ಕಡಿಮೆ ಪರಿಣಾಮ ಬೀರಬಹುದು ಎಂದು ನಂಬಲಾಗಿದೆ. ನವೆಂಬರ್ 2008ರಲ್ಲಿ ಚೀನಾ ದೇಶವು ತನ್ನ ಟೆಕ್ಸ್‌ಟೈಲ್ ಉದ್ಯಮಕ್ಕೆ ವಿಶೇಷ ಆರ್ಥಿಕ ರಿಯಾಯಿತಿಯನ್ನು ಘೋಷಿಸುವ ಮೂಲಕ ಅಮೇರಿಕಾದ ಟೆಕ್ಸ್‌ಟೈಲ್ಸ್ ಮಾರುಕಟ್ಟೆಯ ಶೇ 52ರಷ್ಟು ಹಿಡಿತ ಸಾಧಿಸಿತ್ತು. ಇದರಿಂದ ಅಮೆರಿಕಾವು 'ಚೀನಾದ ಸುರಿವಿರೋಧಿ ನೀತಿ' ನೀತಿಯ ವಿರುದ್ಧ W.T.O.ಗೆ ದೂರು ನೀಡಿತು. ನಂತರ ಅಮೆರಿಕಾದ ಮಾರುಕಟ್ಟೆ ಚೀನಾಗೆ ಕೊಡುತ್ತಿರುವ ಆರ್ಡರ್ ಕಡಿಮೆ ಮಾಡಿದೆ ಎಂದು ವರದಿಗಳು ತಿಳಿಸಿವೆ.




'ದಿ ಎಕನಾಮಿಕ್ ಟೈಮ್ಸ್'
ಡಿಸೆಂಬರ್ 13, 2008: ಅಹಮದಾಬಾದ್

ಇದಲ್ಲದೆ ಬೆಂಗಳೂರಿನ ಕೆಲವು ಪ್ರಮುಖ ಆಡಳಿತ ವರ್ಗವನ್ನು ಮಾತನಾಡಿಸಿದಾಗ, ಬ್ರಾಂಡ್‌ಗಳಿಂದ ಇನ್ನೂ 4 ರಿಂದ 6 ತಿಂಗಳವರೆಗೂ ಮುಂಗಡ ಆರ್ಡರ್ ಬಂದಿದೆ ಎಂದು ಹೇಳುತ್ತಿದ್ದಾರೆ.

ಈ ವರದಿ ಅಚ್ಚಿಗೆ ಹೋಗುವ ಒಂದು ದಿನ ಮುಂಚೆ ಹಲವಾರು ಕಾರ್ಖಾನೆಗಳ ಬಳಿಗೆ ಭೇಟಿ ನೀಡಿದಾಗ ಕಾರ್ಮಿಕರು ಬೇಕಾಗಿದ್ದಾರೆ ಎಂಬ "Wanted" ಬೋರ್ಡ್‌ಗಳು ಕಾಣಿಸುತ್ತಿವೆ.

ಈ ವದಂತಿಗಳು ಹೆಚ್ಚಿನ ರೀತಿಯಲ್ಲಿ ಕಾರ್ಮಿಕರ ಮಧ್ಯೆ ಪ್ರಚಾರಗೊಳ್ಳಲು ಕೆಲವು ಮಾಲೀಕರಪರ ಹಿತಾಸಕ್ತಿಗಳು ಕಾರಣ ಎಂದು ಎನಿಸುತ್ತದೆ. ಸರ್ಕಾರದಿಂದ ಸಿಗುವ ಕೆಲವು ರಿಯಾಯತಿಗಳನ್ನು ಪಡೆದುಕೊಳ್ಳಲು ಈ ರೀತಿ ಸುಳ್ಳು ವದಂತಿಗಳನ್ನು ಹಬ್ಬಿಸುತ್ತಿದ್ದಾರೆ ಎನಿಸುತ್ತದೆ.

2008ರ ಕೊನೆಯ ವೇಳೆಗೆ ವಿಶ್ವದ ಉಡುಪು ರಫ್ತು ಮಾಡುವ ದೇಶಗಳಲ್ಲಿ 6ನೇ ಸ್ಥಾನಕ್ಕೆ ಇಳಿದಿತ್ತು. ಇದು ಭಾರತದ ಮಟ್ಟಿಗೆ ಗರಿಷ್ಠ ಇಳಿಕೆಯಾಗಿದ್ದು, ಇನ್ನೂ ಕೆಳಹೋಗುವ ಸಾಧ್ಯತೆಗಳು ಬಹಳ ಕಡಿಮೆಯಾಗಿದೆ.

ದಿನಗಳೆದಂತೆ 2008 ಕೊನೆಯಲ್ಲಿ ಮತ್ತೆ ರೂಪಾಯಿಯ ಎದುರು ಡಾಲರ್ ಮೌಲ್ಯ (ರೂ. 49)ಏರಿದಾಗ ಗಾರ್ಮೆಂಟ್ಸ್ ಉದ್ಯಮಕ್ಕೆ ಬರುತ್ತಿರುವ ಆರ್ಡರ್‌ಗಳೂ ಹೆಚ್ಚಾಗಿವೆ. ಇದಕ್ಕೆ ನಿದರ್ಶನವೆಂಬಂತೆ, ಕಳೆದ ಡಿಸೆಂಬರ್

ಪ್ರಪಂಚದ ಆರ್ಥಿಕ ಮುಗ್ಗಟ್ಟಿನ ಪರಿಣಾಮ, ದೇಶದ ಮೇಲಾದರೂ, ಗಾರ್ಮೆಂಟ್ಸ್ ಉದ್ಯಮಕ್ಕೆ ಸದ್ಯಕ್ಕೆ ಹೆಚ್ಚಿನ ಹಾನಿಯಿಲ್ಲ ಎಂದು ಖಚಿತವಾಗಿ ಹೇಳಬಹುದು. ಆದರೆ ಆಗುವ ಪರಿಣಾಮವು ಮುಂದೆ ಯಾವಾಗ? ಎಷ್ಟು ಪ್ರಮಾಣದಲ್ಲಿ ಆಗುತ್ತದೆ? ಎಂಬುದನ್ನು ಮುಂದಿನ ಅಧ್ಯಯನಗಳು ನಿರ್ಧರಿಸಬೇಕು.




Scanned with OKEN Scanner

## ಕಾಮನಬಿಲ್ಲು ಶುಭಾಶಯಗಳು



ಯಶವಂತ್
ಹುಟ್ಟಿದ ದಿನಾಂಕ: 02.2.2008
ತಾಯಿ: ಪದ್ಮಾ ತಂದೆ: ಮಂಜುನಾಥ್
ಕಾರ್ಖಾನೆ: ಚಾಯ್ಸ್ ಅಪಾರೆಲ್ಸ್

ಪ್ರತಿ ತಿಂಗಳ ಎರಡನೇ ಭಾನುವಾರದಂದು ನಾಯಂಡಹಳ್ಳಿಯಲ್ಲಿರುವ ಮುನ್ನಡೆಯ ಕೇಂದ್ರದಲ್ಲಿ ಕಾರ್ಮಿಕರಿಗಾಗಿ ಉಚಿತ ವೈದ್ಯಕೀಯ ತಪಾಸಣೆಯನ್ನು ನಡೆಸಲಾಗುತ್ತಿದೆ. ಅಗತ್ಯವಿರುವ ಕಾರ್ಮಿಕರು ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 9449506451, 9739200749

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–26. ದೂ.: 26751320,

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ
ನಂ.53, ವಿನಾಯಕ ಬಡಾವಣೆ ನಾಯಂಡಹಳ್ಳಿ, ಬೆಂಗಳೂರು–39

ಸಮಯ : ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ
   ಸಂಪಂಗಿರಾಮನಗರ
   ಬೆಂಗಳೂರು – 560 027.

   *ಪೀಣ್ಯ ಶಾಖೆ*
   ನಂ. 91, 2ನೇ ಮುಖ್ಯರಸ್ತೆ
   5ನೇ ಅಡ್ಡರಸ್ತೆ, 3ನೇ ಫೇಸ್
   ಗಣಪತಿ ನಗರ, ಪೀಣ್ಯ
   ಬೆಂಗಳೂರು – 560 056
2. ಕರ್ನಾಟಕ ಮಹಿಳಾ ಆಯೋಗ
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು–560009
   ದೂ.: 22216485
3. ವನಿತಾ ಸಹಾಯವಾಣಿ
   ಪೊಲೀಸ್ ಕಮಿಷನರ್ ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
4. ವಿಮೋಚನಾ
   ನಂ, 33/1–9
   ತ್ಯಾಗರಾಜ ಬಡಾವಣೆ, ಜೈಭಾರತನಗರ
   ಮಾರುತಿ ಸೇವಾನಗರ, ಬೆಂಗಳೂರು–38
   ದೂ.: 25492781 / 25492782
5. ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ
   ನ್ಯಾಯ ದೇಗುಲ, ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು–27

## ತಿರುಪೂರ್‌ನಲ್ಲಿ ಬೆಂಗಳೂರಿನ ಕಾರ್ಮಿಕರು.....

ದಿನಾಂಕ ಜನವರಿ 24 ಹಾಗೂ 25ರಂದು 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್ ಟೈಲ್ ವರ್ಕರ್ಸ್ ಯೂನಿಯನ್‌ನಿಂದ ಮುಖಂಡರು ತಿರುಪೂರ್‌ಗೆ 'ಕಾರ್ಮಿಕ ವಿನಿಮಯ' ಕಾರ್ಯಕ್ರಮಕ್ಕೆ ತೆರಳಿದ್ದರು.

ದಕ್ಷಿಣ ಭಾರತದಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ಹೆಸರುವಾಸಿಯಾದ ಸ್ಥಳ ಬೆಂಗಳೂರು, ಬಿಟ್ಟರೆ ತಮಿಳುನಾಡಿನ ತಿರುಪೂರು ಜಿಲ್ಲೆಯೂ ಒಂದು. ನಿಟ್ಟಿಂಗ್ ಉಡುಪುಗಳನ್ನು ಹೆಚ್ಚಾಗಿ ತಯಾರಿಸುವ ಇಲ್ಲಿನ ಕಾರ್ಮಿಕರ ಪರಿಸ್ಥಿತಿ, ಉದ್ಯಮದ ಪರಿಸ್ಥಿತಿ, ಸಂಘಟನೆಗಳ ಪರಿಸ್ಥಿತಿ, ಇತ್ತೀಚಿನ ಆರ್ಥಿಕ ಹಿಂಜರಿತದಿಂದ ಉಂಟಾದ ಪರಿಣಾಮ ಇತ್ಯಾದಿಗಳನ್ನು ತಿಳಿಯಲು ಬೆಂಗಳೂರಿನಿಂದ "ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್ ಟೈಲ್ ವರ್ಕರ್ಸ್ ಯೂನಿಯನ್‌ನಿಂದ ಮುಖಂಡರು ಭೇಟಿ ನೀಡಿದ್ದರು. ❑




ತಿರುಪೂರ್‌ನ ಗಾರ್ಮೆಂಟ್ಸ್ ಕಾರ್ಮಿಕರ ಅನುಭವ ಕೇಳುತ್ತಿರುವ ಯೂನಿಯನ್ ಹಾಗೂ ಮುನ್ನಡೆಯ ಸದಸ್ಯರು.

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ, 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ–560026. ದೂ: 2675 1320
ಪ್ರಕಾಶಕರು : ಸಿವಿಡೆಪ್–ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ.: 26757159

Scanned with OKEN Scanner